# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.3309/2014/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:1.6.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯು:-** ದೂರುದಾರರಿಗೆ ದೊಡ್ಡಬಳ್ಳಾಪುರ ತಾಲ್ಲೂಕು ಬೋಕೀಪುರ ಗ್ರಾಮದ ಸರ್ವೆ ನಂ.45ಕ್ಕೆ ಹೋಗಲು ಸರ್ಕಾರಿ ನಕ್ಷೆಯಲ್ಲಿರುವಂತೆ ಗ್ರಾಮಠಾಣಾ ವ್ಯಾಪ್ತಿಯಲ್ಲಿರುವ ದಾರಿಯನ್ನು ತೆರವುಗೊಳಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ ಎಸ್.ಎಸ್.ವೆಂಕಟೇಶ್, ಸಂಪಾದಕರು, ' ದಾಬಸ್‌ಪೇಟೆ ವಾಯ್ಸ್' ದಾಸನಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ನಂಜಪ್ಪ, ಕಂದಾಯ ನಿರೀಕ್ಷಕರು, ನೆಲಮಂಗಲ ತಾಲ್ಲೂಕು ಮತ್ತು ತಹಶೀಲ್ದಾರ್, ನೆಲಮಂಗಲ, (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ನೆಲಮಂಗಲ ತಾಲ್ಲೂಕು ಮಂಟನಕುರ್ಚಿ ಗ್ರಾಮದ ಸರ್ವೆ ನಂ.212 ಮತ್ತು 212/1 ಪಹಣಿ ಕಾಲಂ.9 ಮತ್ತು 12ರಲ್ಲಿ ಸರ್ಕಾರಿ ಪಡ ಎಂದು ನಮೂದಿಸಲಾಗಿದೆ. ಆದರೆ ಸರ್ವೆ ನಂ.212/1ರ ಜಮೀನಿನ 2006-07ರ ಪಹಣಿ ಕಾಲಂ.9ರಲ್ಲಿ ಎಂ.ನಾಗರಾಜು ಬಿನ್ ಮುನಿಯಪ್ಪ ಎಂ.ಆರ್.25/2005-06 ಎಂದು ನಮೂದಿಸಲಾಗಿದೆ. ಈ ಜಮೀನನ್ನು ಚಿಕ್ಕಮಾರಕ್ಕ ಎಂಬುವವರಿಂದ ಎಂ.ನಾಗರಾಜು ಅವರು ಎಂ.ಆರ್.25/2005-06ರ ಪ್ರಕಾರ ಖರೀದಿಸಿದ್ದು, ಇದೇ ಜಮೀನಿನಲ್ಲಿ 2 ಎಕರೆ ಜಮೀನನ್ನು ಶಿವಣ್ಣ ಅವರಿಂದ ಖರೀದಿಸಿರುವುದಾಗಿ ನಮೂದಿಸಲಾಗಿದೆ. ಸರ್ಕಾರದ ಜಮೀನನ್ನು ಚಿಕ್ಕಮಾರಕ್ಕ ಕ್ರಯಮಾಡಿದ್ದಾದರೂ ಹೇಗೆ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಎದುರುದಾರರು ಎಂ.ನಾಗರಾಜು ಅವರೊಂದಿಗೆ ಷಾಮೀಲಾಗಿ, ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಸರ್ಕಾರಿ ಜಮೀನು ಕಬಳಿಸಲು ಹೊಂಚುಹಾಕಿರುತ್ತಾರೆ.

ಆದ್ದರಿಂದ ಈ ಬಗ್ಗೆ ಕೂಲಂಕುಷ ತನಿಖೆ ಮಾಡಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರ ಸಲ್ಲಿಸಿದ್ದಾರೆ.

3. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸರ್ವೆ ನಂ.12/1ರಲ್ಲಿ 1 ಎಕರೆ ಜಮೀನು 2005–06ನೇ ಸಾಲಿನಲ್ಲಿ ಸರ್ಕಾರಿ ಪಡ ಎಂಬುದಾಗಿ ಇರುವುದನ್ನು ತಹಶೀಲ್ದಾರ್ ರವರ ಆದೇಶ ಸಂ.ಆರ್.ಆರ್.ಟಿ.ಸಿ.ಆರ್.618/2004–05 ದಿ.6.12.2005ರಂತೆ ಪಡವನ್ನು ರೆಸ್ಟೋರ್ ಮಾಡಿರುವಂತೆ ಎಂ.ಆರ್.17/2005–06 ದಿ.6.1.2006ರ ಪ್ರಕಾರ ಚಿಕ್ಕಮಾರಕ್ಕ ಬಿನ್ ಚೆನ್ನಮಾರಯ್ಯನವರ ಹೆಸರಿಗೆ ಖಾತೆಯಾಗಿರುತ್ತದೆ. ಆನಂತರ ಈ 1 ಎಕರೆ ಜಮೀನನ್ನು ಚಿಕ್ಕಮಾರಮ್ಮ ಎಂ.ನಾಗರಾಜು ಅವರಿಗೆ ರಿ.ನಂ.5766/2005–06 ದಿ.10.2.2006ರಂತೆ ಕ್ರಯಮಾಡಿಕೊಟ್ಟಿರುವಂತೆ ಎಂ.ಆರ್.25.2005–06ರಂತೆ ಖಾತೆಯಾಗಿರುವ ಪಹಣಿ ಲಭ್ಯವಿರುತ್ತದೆ. ಆದರೆ ಆ ವೇಳೆಯಲ್ಲಿ ನೆಲಮಂಗಲ ತಹಶೀಲ್ದಾರ್ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರಲಿಲ್ಲ. ಸರ್ವೆ ನಂ.212/1 ಮತ್ತು 212/2 ಜಮೀನುಗಳಲ್ಲಿ ಎಂ.ನಾಗರಾಜ್ ಎನ್ನುವವರು ಅಕ್ರಮ ಲೇ ಔಟ್ ನಿರ್ಮಿಸಿದ್ದು, ಖಾತೆದಾರರ ವಿರುದ್ಧ ಭೂಕಂದಾಯ ಅಧಿನಿಯಮ 96 ರ ಪ್ರಕಾರ ಕ್ರಮಕೈಗೊಳ್ಳಲು ದಿ.25.6.2014ರಂದು ಜಿಲ್ಲಾಧಿಕಾರಿಗಳಿಗೆ ವರದಿ ಮಾಡಲಾಗಿದೆ. ಆ ವರದಿಯ ಆಧಾರದ ಮೇಲೆ ಜಿಲ್ಲಾಧಿಕಾರಿಗಳು ಎಲ್.ಎನ್.ಕೆ.(ಕೆ) ಸಿ.ಆರ್.24/2014–15 ದಿ.7.7.2014ರಂದು ತಹಶೀಲ್ದಾರ್ ರವರಿಗೆ ಭೂಕಂದಾಯ ಅಧಿನಿಯಮ 1954 ಕಲಂ.96ರಡಿ ಕ್ರಮ ಜರುಗಿಸುವಂತೆ ವರದಿ ಮಾಡಿರುತ್ತಾರೆ. 1ನೇ ಎದುರುದಾರರು ದಿ.3.7.2013ರಂದು ಹಾಗೂ 2ನೇ ಎದುರುದಾರರು ದಿ.16.6.2014ರಂದು ಈ ಕಛೇರಿಯಲ್ಲಿ ಕರ್ತವ್ಯ ವಹಿಸಿಕೊಂಡಿರುತ್ತಾರೆ. ಆದ್ದರಿಂದ ಎದುರುದಾರರು ಕರ್ತವ್ಯ ವಹಿಸಿಕೊಳ್ಳುವ ಪೂರ್ವದಲ್ಲಿಯೇ ಸರ್ಕಾರಿ ಪಡವನ್ನು ರೆಸ್ಟೋರ್ ಮಾಡುವುದು, ಅಕ್ರಮ ಬಡಾವಣೆ ನಿರ್ಮಿಸುವುದು, ಮತ್ತು ಖಾತೆ ಬದಲಾವಣೆಗಳು ನಡೆದಿರುತ್ತವೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರುದಾರರು ತಮ್ಮ ದೂರಿನೊಂದಿಗೆ ಅಗತ್ಯ ದಾಖಲೆಗಳನ್ನು ಲಗತ್ತಿಸಿದ್ದು, 1968–69ನೇ ಸಾಲಿನ ಸರ್ವೆ ನಂ.212ರ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ ಕಾಲಂ.9ರಲ್ಲಿ ಪಡ ಎಂದು ನಮೂದಿಸಲಾಗಿದೆ. ಇದು 2005–06ರವರೆಗೆ ಸರ್ಕಾರಿ ಪಡವೆಂದು ಮುಂದುವರೆದಿರುವುದು ದಾಖಲೆಗಳಿಂದ ಕಂಡುಬರುತ್ತದೆ.

ಆದರೆ 2006-07ನೇ ಸಾಲಿನ ಪಹಣಿ ಪತ್ರಿಕೆಯಲ್ಲಿ ಎಂ.ಆರ್.25/2005-06ರ ಪ್ರಕಾರ ಎಂ.ನಾಗರಾಜು ಅವರ ಹೆಸರಿನಲ್ಲಿ ಮ್ಯುಟೇಷನ್ ಅಂಗೀಕಾರವಾಗಿ ಪಹಣಿಯಲ್ಲಿ ಹೆಸರು ದಾಖಲಾಗಿರುತ್ತದೆ. ಎಂ.ನಾಗರಾಜು ರವರು ಚಿಕ್ಕಮಾರಮ್ಮ ಹಾಗೂ ಅವರ ಕುಟುಂಬದವರಿಂದ 9.2.2006ರಂದು ಈ ಜಮೀನನ್ನು ಕ್ರಯ ಮಾಡಿಕೊಂಡ ಬಗ್ಗೆ ಕ್ರಯಪತ್ರ ಲಭ್ಯವಿರುತ್ತದೆ. ಆದರೆ ಸರ್ಕಾರಿ ಪಡವನ್ನು ಯಾವ ರೀತಿಯಾಗಿ ಚಿಕ್ಕಮಾರಮ್ಮನವರು ಖಾತೆ ಬದಲಾವಣೆ ಮಾಡಿಕೊಂಡರು ಮತ್ತು ಪಡವನ್ನು ಯಾವ ಆಧಾರದ ಮೇಲೆ ರೆಸ್ಟೋರ್ ಮಾಡಲಾಯಿತು ಎನ್ನುವ ಬಗ್ಗೆ ದಾಖಲೆಗಳು ಲಭ್ಯವಿರುವುದಿಲ್ಲ.

6. ಇದೇ ಜಮೀನನ್ನು ಎಂ.ನಾಗರಾಜು ಅವರು ಕ್ರಯಮಾಡಿಕೊಂಡ ನಂತರ ಇದರಲ್ಲಿ ಯಾವುದೇ ಕಾನೂನು ನಿಯಮಗಳನ್ನು ಪಾಲಿಸದೆ ಬಡಾವಣೆ ನಿರ್ಮಿಸಿದ್ದು ಕಂಡುಬರುತ್ತದೆ. ಈ ರೀತಿ ಅಕ್ರಮ ಬಡಾವಣೆ ನಿರ್ಮಿಸಿದ್ದಾರೆಂದು ದೂರುದಾರರೇ ಆಗ ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿದರೂ ಸಹಾ ಆ ಬಗ್ಗೆ ಕ್ರಮಕೈಗೊಂಡ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ. ಸರ್ವೆ ನಂ.212 ಒಟ್ಟು ಕ್ಷೇತ್ರ 5 ಎಕರೆ 34 ಗುಂಟೆ ಇದರಲ್ಲಿ 34 ಗುಂಟೆ ಖರಾಬು ಇದ್ದು, ಉಳಿದದ್ದು 5 ಎಕರೆ ಅಂತ ದಾಖಲೆಗಳಿಂದ ಕಂಡು ಬರುತ್ತದೆ. ಆದರೆ ಇದರಲ್ಲಿ 1 ಎಕರೆಯನ್ನು ಪಡ ರೆಸ್ಟೋರ್ ಮಾಡಿ ಚಿಕ್ಕಮಾರಮ್ಮ ಅವರ ಹೆಸರಿನಲ್ಲಿ ನೀಡಿದ್ದು, ಅವರು ಎಂ.ನಾಗರಾಜು ಅವರಿಗೆ ಇದನ್ನು ಕ್ರಯಮಾಡಿರುತ್ತಾರೆ. ಆದ್ದರಿಂದ ಸರ್ಕಾರಿ ಪಡವನ್ನು ರೆಸ್ಟೋರ್ ಮಾಡಿದ್ದು, ರೆಸ್ಟೋರ್ ಮಾಡಿದ ನಂತರ ಚಿಕ್ಕಮಾರಮ್ಮ ಎಂ.ನಾಗರಾಜು ಅವರಿಗೆ ಕ್ರಯಮಾಡಿದ್ದು ಹಾಗೂ ಎಂ.ನಾಗರಾಜು ಅವರು ಈ ಜಮೀನಿನಲ್ಲಿ ಬಡಾವಣೆ ನಿರ್ಮಿಸಿದ್ದು ಅಕ್ರಮವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದರೆ ಈ ಎಲ್ಲಾ ಅಕ್ರಮಗಳು ಜರುಗಿದಾಗ ಎದುರುದಾರರು ಅಲ್ಲಿ ಕರ್ತವ್ಯ ನಿರ್ವಹಿಸದ ಕಾರಣ ಅವರ ವಿರುದ್ಧ ಕ್ರಮಕೈಗೊಳ್ಳಲು ಬರುವುದಿಲ್ಲ.

7. ಆದರೆ ಈ ಮೇಲ್ಕಾಣಿಸಿದ ಸರ್ವೆ ನಂ.212 ಸರ್ಕಾರಿ ಪಡವನ್ನು ರೆಸ್ಟೋರ್ ಮಾಡಿ ಚಿಕ್ಕಮಾರಮ್ಮನವರ ಹೆಸರಿನಲ್ಲಿ ಖಾತೆ ಮಾಡಿದ್ದು, ಆ ನಂತರ ಈ ಜಮೀನು ಸರ್ವೆ ನಂ.212/1 ಅಂತ ಪೋಡಿಯಾಗಿ ಎಂ.ನಾಗರಾಜು ಅವರಿಗೆ 1 ಎಕರೆ ಕ್ರಯವಾಗಿರುತ್ತದೆ. ಸರ್ವೆ ನಂ.212/2 ಅಂತ ಇನ್ನೊಂದು ಪೋಡಿಯಾಗಿ ಶಿವಣ್ಣ ಬಿನ್ ದೊಡ್ಡರುದ್ರಯ್ಯನವರ ಹೆಸರಿನಲ್ಲಿ ಖಾತೆಯಾಗಿ 2 ಎಕರೆ ಎಂ.ನಾಗರಾಜು ಅವರು ಕ್ರಯಮಾಡಿಕೊಂಡಿರುತ್ತಾರೆ.

8. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ನೆಲಮಂಗಲ ತಾಲ್ಲೂಕು ಮಂಟನಕುರ್ಚೆ ಗ್ರಾಮದ ಸರ್ವೆ ನಂ.212 ಒಟ್ಟು ಮೂಲ ಕ್ಷೇತ್ರ 5.34 ಎಕರೆ ಸರ್ಕಾರಿ

3

ಪಡವನ್ನು ಅಕ್ರಮವಾಗಿ ಖಾಸಗಿ ವ್ಯಕ್ತಿಗಳಿಗೆ ಖಾತೆ ಮಾಡಿ ನಂತರ ಅದರಲ್ಲಿ ಅಕ್ರಮ ಬಡಾವಣೆ ನಿರ್ಮಿಸಿರುವುದರಿಂದ ಈ ಬಗ್ಗೆ ತನಿಖೆ ಮಾಡಿ ಇದರಲ್ಲಿ ಅಕ್ರಮವೆಂದು ಕಂಡುಬಂದರೆ ಸರ್ವೆ ನಂ.212 ಒಟ್ಟು ಕ್ಷೇತ್ರ 5.34 ಎಕರೆ ಜಮೀನನ್ನು ಪುನ ಸರ್ಕಾರದ ವಶಕ್ಕೆ ಕಾನೂನುಪ್ರಕಾರ ಪಡೆದುಕೊಳ್ಳಲು **ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 1/4/17

**[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**